ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು) :

ಅ) ಹೌದು.

ಆ) ದಿನಾಂಕ 24-11-2003 ರಿಂದ ಕಾರ್ಯ ನಿರ್ವಹಿಸುತ್ತಿದೆ.

ಇ) ಸರಕು ಖರೀದಿ ನಿರ್ದೇಶನಾಲಯ, ಬೆಂಗಳೂರು ಇಲ್ಲಿಂದ ಈ ಕೆಳಕಂಡ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

1)	ಪ್ರಥಮ ದರ್ಜೆ ಸಹಾಯಕ	–	2
2)	ದ್ವಿತೀಯ ದರ್ಜೆ ಸಹಾಯಕ	–	1
3)	ಬೆರಳಚ್ಚುಗಾರರು	–	2
4)	ದಲಾಯತ್	–	3

ಈ) ಪ್ರಕರಣಗಳು ವಿಚಾರಣೆಯಲ್ಲಿವೆ.

ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿ ನಡೆಸುತ್ತಿರುವ ಲಾಟರಿ ಡ್ರಾಗಳ ಬಗ್ಗೆ

88 (258) : ಶ್ರೀ ಸುರೇಶ್ ಕುಮಾರ್ ಎಸ್. (ರಾಜಾಜಿನಗರ) ಮಾನ್ಯ ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ, ಪ್ರೋಸೆಸ್ಸಿಂಗ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಎಂ.ಎಸ್.ಐ.ಎಲ್. ಪ್ರತಿದಿನ ನಡೆಸುತ್ತಿರುವ ಲಾಟರಿ ಡ್ರಾಗಳ ಸಂಖ್ಯೆ ಎಷ್ಟು;

ಆ) ಈ ಲಾಟರಿ ಡ್ರಾಗಳ ಸಂಖ್ಯೆ ಎಷ್ಟು;

ಇ) ಎಂ.ಎಸ್. ಐ.ಎಲ್. ಸಂಸ್ಥೆ ಹೊರತುಪಡಿಸಿ ರಾಜ್ಯದಲ್ಲಿ ಯಾವ ಯಾವ ರಾಜ್ಯಗಳ ಲಾಟರಿಗಳ ಎಷ್ಟು ಡ್ರಾಗಳು ನಡೆಯುತ್ತಿದೆ; ವಿವರಗಳನ್ನು ನೀಡುವುದು;

ಈ) ಇವುಗಳಿಂದ ರಾಜ್ಯ ಸರ್ಕಾರಕ್ಕೆ ಬರುತ್ತಿರುವ ಆದಾಯವೆಷ್ಟು?

ಶ್ರೀ ಬಾಬುರಾವ್ ಬಸವಣ್ಣಪ್ಪ ಚಿಂಚನ್ಸೂರ್ (ಸಣ್ಣ ಉಳಿತಾಯ, ರಾಜ್ಯ ಲಾಟರಿ, ವಿಮೆ ಹಾಗೂ ಆಗ್ರೋ, ಪ್ರೋಸೆಸ್ಸಿಂಗ್ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯ ಸರ್ಕಾರವು ಮೆ: ಎಂ.ಎಸ್.ಐ.ಎಲ್. ಮೂಲಕ ಪ್ರತಿದಿನ 7 ಲಾಟರಿ ಡ್ರಾಗಳನ್ನು ಮಂಗಳವಾರ, ಶುಕ್ರವಾರ ಹಗೂ ಶನಿವಾರಗಳಂದು 8 ಲಾಟರಿಗಳನ್ನು ನಡೆಸಲಾಗುತ್ತಿದೆ.

ಆ) ಪ್ರತಿದಿನ 7 ಲಾಟರಿ ಡ್ರಾಗಳನ್ನು, ಮಂಗಳವಾರ, ಶುಕ್ರವಾರ ಹಾಗೂ ಶನಿವಾರಗಳಂದು 8 ಲಾಟರಿಗಳನ್ನು ನಡೆಸಲಾಗುತ್ತಿದೆ.

ಇ) ಲಾಟರಿ ಮುಕ್ತ ವಲಯ ವಲ್ಲದ ರಾಜ್ಯಗಳಲ್ಲಿ ಇತರೆ ರಾಜ್ಯ ಲಾಟರಿಯನ್ನು ನಡೆಸಲು ಲಾಟರಿ ರೆಗ್ಯುಲೇಷನ್ ಆಕ್ಟ್ 98ರ ಅನ್ವಯ ಅವಕಾಶವಿದೆ. ಪ್ರಸ್ತುತ 8 ರಾಜ್ಯಗಳು ಕರ್ನಾಟಕ ರಾಜ್ಯದಲ್ಲಿ ತಮ್ಮ ಲಾಟರಿಗಳನ್ನು ನಡೆಸುತ್ತಿವೆ. ದಿನಾಂಕ: 10.12.2003 ರಿಂದ ಜಾರಿಗೆ ಬಂದಿರುವ ಲಾಟರಿ ತೆರಿಗೆ ಸುಗ್ರೀವಾಜ್ಞೆ ಹಿನ್ನೆಲೆಯಲ್ಲಿ ಡ್ರಾಗಳ ವಿವರಗಳನ್ನು ಸಂಗ್ರಹಿಸಲಾಗುತ್ತಿದೆ.

ಈ) ಪ್ರಸ್ತುತ ರಾಜ್ಯ ಸರ್ಕಾರಕ್ಕೆ ದಿ: 10.12.03 ರಿಂದ ಜಾರಿಗೊಳಿಸಿರುವ ಬೆಟ್ಟಿಂಗ್ (ಲಾಟರಿ) ತೆರಿಗೆ ಸುಗ್ರೀವಾಜ್ಞೆ ಹೊರಡಿಸಿರುವ ಹಿನ್ನೆಲೆಯಲ್ಲಿ ಪ್ರತಿದಿನ ಸುಮಾರು 35 ರಿಂದ 40 ಲಕ್ಷ ಆದಾಯ ನಿರೀಕ್ಷಿಸಿದೆ.